# ಪತ್ರ ಸಂಸ್ಕೃತಿ

'ಕಾಗದ ಬಂದಿದೆ ಕಮಲನಾಭನದು' ಎಂದು ಪ್ರಾರಂಭವಾಗುವ ಪುರಂದರ ದಾಸರ ಒಂದು ಸೊಗಸಾದ ರಚನೆ ಇದೆಯಷ್ಟೆ? ಅದರಲ್ಲಿ ಸಾಕ್ಷಾತ್ ಭಗವಂತನೇ ಭಕ್ತರಿಗೆ ಬರೆದ ಪತ್ರವನ್ನು ವಿವರ ಪೂರ್ಣವಾಗಿ ಪುರಂದರದಾಸರು ವರ್ಣಿಸುತ್ತಾರೆ. ಭಗವಂತ ಬರೆದ ಪತ್ರ ಸಹಜವಾಗಿಯೇ ಅತ್ಯಂತ ಅಮೂಲ್ಯವಾದುದು; ಲೋಕಾಭಿರಾಮವೆನ್ನಿಸುವ ಸಾಧಾರಣ ಪತ್ರವಲ್ಲ; ಮತ್ತೆ ಮತ್ತೆ ಓದಿ ಮನನ ಮಾಡುತ್ತಲೇ ಇರಬೇಕಾದ ಹಾಗೂ ಜತನದಿಂದ ಕಾಪಾಡಿಕೊಳ್ಳಬೇಕಾದ ಪತ್ರವದು! ಆದ್ದರಿಂದಲೇ ದಾಸರು ಭಕ್ತರಿಗೆ 'ಆ ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೋ' ಎಂದು ಸಲಹೆ ಕೊಡುತ್ತಾರೆ, ಏಕೆಂದರೆ ಮನುಷ್ಯರ ಬದುಕು ಹೇಗೆ ಇರಬೇಕೆಂಬುದರ ಬಗೆಗೆ ಆ ಪತ್ರದಲ್ಲಿ ಮಾರ್ಗದರ್ಶಕ ಸೂತ್ರಗಳಿವೆ; ಶುಚಿ ಜೀವನ ನಡೆಸಲು ಅಗತ್ಯವಾಗಿರುವ ನೀತಿ ನಿಯಮಗಳಿವೆ; ಭಕ್ತರನ್ನು ಭಗವಂತ ತನ್ನೆಡೆಗೆ ಸೆಳೆದುಕೊಳ್ಳುವ ಆತ್ಮೀಯ ಹಿತನುಡಿಗಳಿವೆ.

ಪುರಂದರ ದಾಸರ ಈ ಹಾಡಿನಲ್ಲಿ ಅವರಿಗೆ ಸಹಜವಾಗಿದ್ದ ಭಾಗವತ ಮನೋಧರ್ಮ ಪ್ರಕಟವಾಗಿರುವುದನ್ನು ನಾವು ಕಾಣುತ್ತೇವೆ. ಅಷ್ಟು ಮಾತ್ರವಲ್ಲ, ಅದು ನಮ್ಮ ಪತ್ರ ಸಂಸ್ಕೃತಿಯನ್ನು ಕುರಿತಾದ ಚಿಂತನೆಗೂ ದಾರಿ ಮಾಡಿಕೊಡುತ್ತದೆ. ನಮ್ಮ ಹಿರಿಯರೂ, ಹಿತೈಷಿಗಳೂ ಕಿರಿಯರಿಗೆ ಮಾರ್ಗದರ್ಶನ ಮಾಡಲು, ಅವರು ಸರಿದಾರಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ಪತ್ರಗಳನ್ನೇ ಸಾಧನವಾಗಿರಿಸಿಕೊಳ್ಳುತ್ತಿದ್ದರು. ವಿಚಾರ ವಿನಿಮಯ, ಕ್ಷೇಮಸಮಾಚಾರ, ವ್ಯಾವಹಾರಿಕ ಚಟುವಟಿಕೆ ಇತ್ಯಾದಿಗಳನ್ನು ಪತ್ರಗಳ ಮೂಲಕವೇ ನೆರವೇರಿಸಿಕೊಳ್ಳುವ ಕಾಲವೊಂದಿತ್ತು. ಪ್ರೀತಿ, ಸ್ನೇಹ, ವಾತ್ಸಲ್ಯ–ಮುಂತಾದ ನವಿರು ಭಾವನೆಗಳನ್ನೂ ಪತ್ರಗಳೇ ಹೊತ್ತುತಂದು ಸಂಬಂಧಿಸಿದವರಿಗೆ ತಲುಪಿಸುತ್ತಿದ್ದವು. ಪತ್ರಗಳು ವ್ಯಕ್ತಿ ವ್ಯಕ್ತಿಗಳ ನಡುವಣ ಬಾಂಧವ್ಯವನ್ನು ಗಟ್ಟಿಗೊಳಿಸುವ, ದುಃಖದ ಸಂದರ್ಭದಲ್ಲಿ ಸಾಂತ್ವನ ಹೇಳುವ, ಅಪರಿಚಿತರನ್ನು ಪರಿಚಿತರನ್ನಾಗಿ ಮಾಡಿಕೊಳ್ಳುವ, ಕಷ್ಟದ ಸಂದರ್ಭಗಳಲ್ಲಿ ಸಹಾಯವನ್ನು ಒದಗಿಸುವ– ಇಂಥ ಹಲವು ಕೆಲಸಗಳನ್ನು ನಿರ್ವಹಿಸುತ್ತಿದ್ದ ಕಾಲವೂ ಇತ್ತು. ಪತ್ರ ಸಂಸ್ಕೃತಿಯ ಈ ಹಲವು ಮುಖಗಳ ಅರಿವಿದ್ದ ಪುರಂದರದಾಸರು ಭಗವಂತನಿಂದ ಪತ್ರವನ್ನು ಬರೆಯಿಸಿ, ಸಂಭ್ರಮಿಸಿರುವುದು ಅಚ್ಚರಿಯ ಸಂಗತಿಯಲ್ಲ.

ದಾಸರು ತಮ್ಮ ಹಾಡಿನಲ್ಲಿ 'ಆ ಕಾಗದವನ್ನು ಓದಿಕೊಂಡು ಕಾಲವ ಕಳೆಯಿರಿ' ಎಂದು ಭಕ್ತರಿಗೆ ಸೂಚಿಸಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವಷ್ಟೇ? ನಮ್ಮ ಹಿಂದಿನ ತಲೆಮಾರಿನವರು ಈ ಮಾತನ್ನು ಬಹುಪಾಲು ಪಾಲಿಸುತ್ತಿದ್ದರೆಂಬುದಕ್ಕೆ ಅವರ ಪತ್ರ ಸಂಗೋಪನ ವ್ಯವಸ್ಥೆಯೇ ಸಾಕ್ಷಿ. ಕೆಲವು ದಶಕಗಳ ಹಿಂದೆ ಬಹುತೇಕ ಮನೆಗಳಲ್ಲಿ ಕಬ್ಬಿಣದ ಕಡ್ಡಿಯೊಂದಕ್ಕೆ ಪತ್ರಗಳನ್ನು ಪೋಣಿಸಿ, ಅದರ ಕೊಕ್ಕೆಯನ್ನು ಗೋಡೆಯ ಮೊಳೆಗೆ ತಗಲು ಹಾಕಿಡುತ್ತಿದ್ದರು. ಈ ವ್ಯವಸ್ಥೆಯಿಂದಾಗಿ ಅಗತ್ಯ ಸಂದರ್ಭಗಳಲ್ಲಿ ಅಗತ್ಯವಿದ್ದ ಪತ್ರಗಳನ್ನು ಹುಡುಕಿ ತೆಗೆದು ಓದಲು ಸಾಧ್ಯವಾಗುತ್ತಿತ್ತು. ಹೀಗೆ ನಮ್ಮ ಹಿರಿಯರು ತಮಗೆ ಬಂದ ಕಾಗದಗಳನ್ನು ಹರಿದೆಸೆಯದೇ, ಜೋಪಾನವಾಗಿ ಇರಿಸಿ, ಮುಂದಿನ ತಲೆಮಾರಿಗಾಗಿ ಕೂಡಿಡುತ್ತಿದ್ದರು. ಒಂದು ದೇಶದ ರಾಜಕೀಯ, ಸಾಂಸ್ಕೃತಿಕ ಇತಿಹಾಸಕ್ಕೆ ಕೆಲವು ಪ್ರಮುಖ ಪತ್ರಗಳು ಸಂಪನ್ಮೂಲ ವಸ್ತುಗಳಾಗಿ ಒದಗುವಂತೆ, ಒಂದು ಮನೆತನದ ಏಳುಬೀಳುಗಳ, ಅದರಲ್ಲಿ ಸಂಭವಿಸಿದ ಸ್ಥಿತ್ಯಂತರಗಳ ದಾಖಲೆಗಳಾಗಿ ಇಂಥ ಪತ್ರಗಳು ಒದಗಿಬರುತ್ತಿದ್ದುದು ಸುಳ್ಳಲ್ಲ, ಹಳೆಯ ಪತ್ರಗಳ ಓದು ಎಂಬುದು ಓದುಗನನ್ನು ವರ್ತಮಾನದಿಂದ ಭೂತಕಾಲಕ್ಕೆ ಕರೆದೊಯ್ಯುತ್ತದೆ ಎಂಬುದು ನಮ್ಮೆಲ್ಲರ ಅನುಭವ. ಹಿರಿಯರಲ್ಲಿ ಗೆಳೆಯರೋ, ಆತ್ಮೀಯರೋ ಯಾವುದೋ ಒಂದು ಕಾಲದಲ್ಲಿ ಬರೆದಿದ್ದ ಪತ್ರ ನಮ್ಮನ್ನು ನಾವು ಮರೆತಿರುವೆವೆಂದು ಭಾವಿಸಿದ್ದ ಅನುಭವ ಪ್ರಪಂಚಕ್ಕೆ ಮತ್ತೊಮ್ಮೆ ಸೆಳೆಯುತ್ತವೆ. ಮಹಾನ್ ವ್ಯಕ್ತಿಗಳು ಬರೆದ ಪತ್ರಗಳಂತೂ ಸಾಂಸ್ಕೃತಿಕ ಹಾಗೂ ಐತಿಹಾಸಿಕ ದಾಖಲೆಗಳಾಗಿ, ಪ್ರಪಂಚದ ಪಾಲಿಗೆ ಅಮೂಲ್ಯ ಆಸ್ತಿಯಾಗಿ ಉಳಿದುಕೊಳ್ಳುತ್ತವೆ.

ಇಂಥ ಪತ್ರ ಸಂಸ್ಕೃತಿ ಈ ಕಾಲ ಘಟ್ಟದಲ್ಲಿ ನಶಿಸುತ್ತಿರುವುದು ನಿಜಕ್ಕೂ ವಿಷಾದನೀಯ. ಈಗ ಸಂಪರ್ಕ ಹಾಗೂ ಸಂವಹನ ಸಾಧನೆಗಳಾಗಿ ಟೆಲಿಫೋನ್, ಮೊಬೈಲ್, ಕಂಪ್ಯೂಟರ್– ಇಂಥ ಅನೇಕ ಮಾಧ್ಯಮಗಳು ಪರಿಣಾಮಕಾರಿಯಾಗಿ, ಅತ್ಯಂತ ತ್ವರಿತವಾಗಿ ಕಾರ್ಯ ನಿರ್ವಹಿಸುತ್ತಿವೆ, ನಿಜ. ಆದರೆ ಪತ್ರಗಳ ಮೂಲಕ ನಡೆಯುತ್ತಿದ್ದ ಸಂವಹನ ಕ್ರಿಯೆಯಲ್ಲಿನ ಆಪ್ತತೆ ಈಗೀಗ ದುರ್ಲಭವಾಗಿದೆಯೆಂದರೆ ತಪ್ಪಲ್ಲ. ದೂರವಾಣಿಯಲ್ಲಿನ ಮಾತು ಕ್ಷಣಾರ್ಧದಲ್ಲಿ ಗಾಳಿಗೆ ಸೇರಿ ಹೋಗುತ್ತದೆ; ಅದರ ಪರಿಣಾಮ ವಿಸ್ಮೃತಿಗೆ ಒಳಗಾಗುತ್ತದೆ. ಮಿಂಚಂಚೆಯ ಸಂದೇಶ ಯಾಂತ್ರಿಕವೆನ್ನಿಸುತ್ತದೆ. ಆದರೆ ಪತ್ರದಲ್ಲಿನ ಸಾಲುಗಳು ಶಾಶ್ವತವಾಗಿ ಉಳಿಯುತ್ತವೆ. ಆದಾಗ್ಯೂ ಈಗೀಗ ಪತ್ರ ಬರೆಯುವ ಅಭ್ಯಾಸವನ್ನು ಮುಂದುವರಿಸಿಕೊಂಡುಬಂದಿರುವ ವಿರಳರನ್ನು ಓಬೀರಾಯನ ಕಾಲದವರೆಂದು ಪರಿಗಣಿಸಲಾಗುತ್ತಿರುವುದು ಸುಳ್ಳಲ್ಲ!

■ ವೈನತೇಯ

## ಮಾತೇ ಮುತ್ತು

★ ಲಕ್ಷಾಂತರ ವೈರಿಗಳನ್ನು ಗೆಲ್ಲುವುದಕ್ಕಿಂತ ನಿನ್ನನ್ನು ನೀನು ಗೆಲ್ಲುವುದೇ ಅತ್ಯುತ್ತಮ.
–ಭಗವಾನ್ ಮಹಾವೀರ

★ ಪ್ರೀತಿಗೆ ಹೆದರಿದರೆ ಜೀವನಕ್ಕೆ ಹೆದರಿದಂತೆ. ಜೀವಿಸಲು ಹೆದರಿದವರು ಮುಕ್ಕಾಲು ಪಾಲು ಸತ್ತಂತೆಯೇ.
–ಬರ್ಟ್ರೆಂಡ್ ರಸೆಲ್

★ ಜಗತ್ತನ್ನು ಬದಲಾಯಿಸಬಲ್ಲ ಶಕ್ತಿಶಾಲಿ ಆಯುಧವೇ ಶಿಕ್ಷಣ.
–ನೆಲ್ಸನ್ ಮಂಡೇಲ

★ ಕೇಳಿದರೆ ನಿಮಗೆ ಕೊಡಲಾಗುತ್ತದೆ, ಹುಡುಕಿದರೆ ನಿಮಗೆ ಸಿಗುತ್ತದೆ. ಬಡಿದರೆ ಮಾತ್ರ ಬಾಗಿಲು ತೆರೆದುಕೊಳ್ಳುತ್ತದೆ.
–ಯೇಸು ಕ್ರಿಸ್ತ

★ ಸಂಗೀತದ ಒಂದು ಒಳ್ಳೆಯ ಸಂಗತಿಯೆಂದರೆ ಅದು ನಿಮ್ಮನ್ನು ಬಡಿದಾಗ ನೋವಾಗುವುದಿಲ್ಲ.
–ಬಾಬ್ ಮಾರ್ಲೆ

★ ತಪ್ಪುಗಳನ್ನು ಮಾಡುವ ಸ್ವಾತಂತ್ರ್ಯ ಇಲ್ಲವಾದಲ್ಲಿ ಆ ಸ್ವಾತಂತ್ರ್ಯಕ್ಕೆ ಬೆಲೆಯೇ ಇರುವುದಿಲ್ಲ.
–ಮಹಾತ್ಮಾ ಗಾಂಧೀಜಿ

★ ನಿಮ್ಮ ಕೋಪ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಎಲ್ಲವನ್ನೂ ಆಲಿಸುವ ಸಾಮರ್ಥ್ಯವು ಶಿಕ್ಷಣದಿಂದ ಸಿಗುತ್ತದೆ.
–ರಾಬರ್ಟ್ ಫ್ರಾಸ್ಟ್

★ ನಿಂತುಕೊಂಡು, ನೀರಿನತ್ತ ದಿಟ್ಟಿಸಿ ನೋಡುವುದರಿಂದ ಸಮುದ್ರವನ್ನು ದಾಟಲಾಗುವುದಿಲ್ಲ.
–ರವೀಂದ್ರನಾಥ ಠ್ಯಾಗೋರ್

★ ಶೈಲಿಯ ಪ್ರಶ್ನೆ ಬಂದಾಗ ಪ್ರವಾಹದ ಜತೆಗೇ ಈಜಿ. ತತ್ವದ ಪ್ರಶ್ನೆ ಬಂದಾಗ ಬಂಡೆಯಂತೆ ಅಚಲವಾಗಿ ನಿಲ್ಲಿ.
–ಥಾಮಸ್ ಜಫರ್ಸನ್

★ ರಾಜಕೀಯವೆಂದರೆ ರಕ್ತರಹಿತ ಯುದ್ಧ; ಯುದ್ಧ ಎಂದರೆ ರಕ್ತ ಸಹಿತ ರಾಜಕೀಯ.
–ಮಾವೋ ತ್ಸೆ ತುಂಗ್

★ ಸ್ವಹಿತಾಸಕ್ತಿ ಇಲ್ಲದ ಗೆಳೆತನವೇ ಇಲ್ಲ. ಇದು ಕಹಿಯಾದ ಸತ್ಯ.
–ಚಾಣಕ್ಯ

★ ದೇವರ ಪ್ರೀತಿಯಿಂದ ತುಂಬಿದ ಒಂದು ಇರುವೆಗೆ, ಅಧಿಕಾರ ಮತ್ತು ಸಂಪತ್ತು ತುಂಬಿರುವ ಚಕ್ರವರ್ತಿಗಳೂ ಸಮನಾಗುವುದಿಲ್ಲ.
–ಗುರು ನಾನಕ್

★ ಯುದ್ಧದ ಕೊನೆಯನ್ನು ಸತ್ತವರು ಮಾತ್ರ ಕಾಣುತ್ತಾರೆ.
–ಪ್ಲೇಟೋ

★ ಇಡೀ ಜಗತ್ತೇ ನಿನ್ನಲ್ಲಿ ಅಡಗಿದೆ. ಹೇಗೆ ನೋಡಬೇಕು ಮತ್ತು ಗ್ರಹಿಸಬೇಕು ಎನ್ನುವುದು ನಿನಗೆ ಗೊತ್ತಿದ್ದರೆ ಬಾಗಿಲೂ, ಕೀಲಿಕೈಯೂ ನಿನ್ನ ಬಳಿಯೇ ಇರುತ್ತದೆ.
–ಜಿಡ್ಡು ಕೃಷ್ಣಮೂರ್ತಿ